**OS- 102 /2019**
**PW-1**

ಇಂದು ದಿಃ**10-04-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಸಿ ವಕೀಲರಿಂದ 4 ರಿಂದ 6 ನೇ ಪ್ರತಿವಾದಿಗಳ ಪರಃ**

ನನ್ನ ಅಜ್ಜನ ಹೆಸರು ನಂದ್ಯಪ್ಪ ಎಂದು ಇರುತ್ತದೆ. ನನ್ನ ಅಜ್ಜಿಯ ಹೆಸರು ನನಗೆ ಗೊತ್ತಿಲ್ಲ. ನಂದ್ಯಪ್ಪ ಈತನಿಗೆ ಕರಿಬಸಪ್ಪ ಮತ್ತು ನಿಂಗಪ್ಪ ಎಂಬ ಇಬ್ಬರು ಮಕ್ಕಳು. ನನ್ನ ತಂದೆಯ ಹೆಸರ ಕರಿಬಸಪ್ಪ . ನನ್ನ ತಂದೆಗೆ ಇಬ್ಬರು ಹೆಂಡತಿಯರು, ಅವರೆಂದರೆ ಗೌರಮ್ಮ ಮತ್ತು ಗಿರಿಜಮ್ಮ . ನನ್ನ ತಾಯಿಯ ಹೆಸರು ಗೌರಮ್ಮ. ನನ್ನ ತಾಯಿ ಈಗ ಸುಮಾರು 10 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಮದುವೆ ಈಗ ಸುಮಾರು 6-7 ವರ್ಷಗಳ ಹಿಂದ ಆಗಿರುತ್ತದೆ. ನನ್ನ ತಂದೆ ಈಗ ಸುಮಾರು 8 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನನ್ನ ತಂದೆ ದಿಃ 12-08-2017 ರಂದು ತೀರಿಕೊಂಡಿರುತ್ತಾರೆಂದರೆ ಸರಿ . ಸಾಕ್ಷಿಗೆ ಸದರಿ ಕರಿಬಸಪ್ಪನ ಮರಣ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಿ ಕೇಳಲು ಗುರುತಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನನ್ನ ತಾಯಿಗೆ ನಾವು ಇಬ್ಬರು ಜನ ಮಕ್ಕಳು. ನನ್ನ ಸಹೋದರಿ ಪ್ರಮೀಳಮ್ಮ ತೀರಿಕೊಂಡಿದ್ದಾರೆ. ಸುಮಾರು 10-12 ವರ್ಷಗಳ ಹಿಂದೆ ಆಕೆ ತೀರಿಕೊಂಡಿದ್ದಾಳೆ. ಸಾಕ್ಷಿಗೆ ಒಂದು ಮರಣ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿ ತೋರಿಸಿ ಪ್ರಮೀಳಮ್ಮ ದಿಃ 24-10-2007 ರಂದು ತೀರಿಕೊಂಡಿದ್ದಾರೆ ಎಂದರೆ ಸರಿ . ಸಾಕ್ಷಿ ಸದರಿ ಮರಣ ಪತ್ರಮಾಣ ಪತ್ರವನ್ನು ಗುರುತಿಸಿದ ಕಾರಣ ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಪ್ರಮೀಳಮ್ಮ ನ ಗಂಡ ಎಂದರೆ 1 ನೇ ಪ್ರತಿವಾದಿ. 2 ಮತ್ತು 3 ನೇ ಪ್ರತಿವಾದಿಯರು ಅವರ

ಮಕ್ಕಳು. ನನ್ನ ತಂದೆ ಬದುಕಿದ್ದಾಗ , ಒಂದು ಎಕರೆ ಜಮೀನನ್ನು 1 ನೇ ಪ್ರತಿವಾದಿಗೆ ಕೊಟ್ಟಿದ್ದರು ಎಂದರೆ ಸರಿ . 1 ನೇ ಪ್ರತಿವಾದಿ ನನ್ನ ತಂದೆಯ ವಂಶವೃಕ್ಷದಲ್ಲಿ ಬರುವುದಿಲ್ಲ ಎಂದರೆ ಸರಿ . ದಿಃ 09-03-2000 ಇಸವಿಯಲ್ಲಿ ಗೌರಮ್ಮ ಮತ್ತು ಗಿರಿಜಮ್ಮ ಸೇರಿ ಷೆಡ್ಯೂಲ್ ಬಿ ಐಟಂ ನಂ. 1 ಆಸ್ತಿಗೆ 4 ನೇ ಪ್ರತಿವಾದಿ ತನ್ನ ಹೆಸರನ್ನು ದಾಖಲು ಮಾಡಿಕೊಳ್ಳಬಹುದು ಎಂದು ಹೇಳಿ, ಒಪ್ಪಿಗೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಷೆಡ್ಯೂಲ್ ಬಿ ಐಟಂ ನಂ. 2 ಆಸ್ತಿಯನ್ನು 1 ನೇ ಪ್ರತಿವಾದಿಗೆ ನನ್ನ ತಂದೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆ ಅವರ ಮಗಳಿಗೆಂದು ಕೊಟ್ಟಿದ್ದು , ಖರೀದಿ ಎಂದು ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. ಸರ್ವೇ ನಂ. 39/4 ನ್ನು ನನ್ನ ತಂದೆ ನನ್ನ ಮದುವೆಯ ಖರ್ಚಿಗೆಂದು ಮಾರಿರುತ್ತಾರೆಂದು ಸರಿಯಲ್ಲ. ನಾನು ಸಹ ಸದರಿ ಕ್ರಯ ಪತ್ರಕ್ಕೆ ಸಾಕ್ಷಿದಾರರು ಎಂದು ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಸರ್ವೇ ನಂ. 33/3 ಮತ್ತು ಸರ್ವೇ ನಂ. 33/4 ನ್ನು ನಾವೆಲ್ಲರೂ ಸೇರಿ ಮಾರಾಟ ಮಾಡಿದ್ದೇವೆಂದರೆ ಸರಿಯಲ್ಲ . ಅದೇ ರೀತಿ ಸರ್ವೇ ನಂ. 42/1 ನ್ನೂ ಸಹ 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆಂದರೆ ಸರಿಯಲ್ಲ.

ನನ್ನ ವಾದ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ನಾನು ಆದ ಕ್ರಯ ಪತ್ರಗಳ ಮತ್ತು ಪಾಲುವಿಭಾಗ ಪತ್ರದ ಬಗ್ಗೆ ಯಾವುದೇ ಘೋಷಣಾತ್ಮಕ ಪರಿಹಾರ ಕೇಳದೆ ಇರುವ ಕಾರಣ ನನ್ನ ತಂದೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಇವೆಲ್ಲಾ ದಾವಾ ಆಸ್ತಿಗಳು ಎಂದು ಎಲ್ಲಿಯೂ ತಿಳಿಸಿಲ್ಲ ಎಂದರೆ ಸರಿಯಲ್ಲ. ಕ್ರಯ

**OS- 102 /2019**
**PW-1**

ಪತ್ರಗಳು ಮತ್ತು ಪಾಲು ವಿಭಾಗ ಪತ್ರ ಕಾನೂನು ಬದ್ದವಾಗಿರುತ್ತವೆ ಎಂದರೆ ಸರಿಯಲ್ಲ. ಈಗಾಗಲೇ ಈ ಹಿಂದೆ ಪಾಲು ವಿಭಾಗ ಆಗಿರುವ ಕಾರಣ , ನಾನು ಒಟ್ಟು ಕುಟುಂಬದ ಸದಸ್ಯೆ ಎಂದು ಉಳಿದಿಲ್ಲ ಎಂದರೆ ಸರಿಯಲ್ಲ. ನನ್ನ ದಾವೆ ಕಾಲಪರಿಮಿತಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇಳಿದ ಪರಿಹಾರ ಪಡೆಯಲು ಅರ್ಹಳು ಅಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವಾ ಕಾರಣ ತೋರಿಸಿ ಪ್ರತಿವಾದಿಗೆ ತೊಂದರೆ ಕೊಡಲು ಈ ದಾವೆ ಮಾಡಿದ್ದೇನೆಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.